ವರ್ತನೆ ವಿಚಿತ್ರವಾಗಿ ಕಾಣಿಸಿತು. ಮೈಯಲ್ಲಿ ಹುಶಾರಿಲ್ಲದಿರಬಹುದೆಂದು ಹತ್ತಿರ ಹೋಗಿ ಹಣೆ ಮುಟ್ಟಿ ನೋಡಿದವಳ ಕೈಯನ್ನು ದೂರ ಸರಿಸಿ ಧಡಕ್ಕನೆ ಮಂಚದಿಂದೆದ್ದು ಬಂದಷ್ಟೆ ವೇಗದಲ್ಲಿ ಹೊರಬಂದು ಲಾಡ್ಜಿನ ಕಡೆ ಹೆಜ್ಜೆ ಹಾಕತೊಡಗಿದ ಗಂಗಾಧರ.

***

ಈ ನಡುವೆ ಗಂಗಾಧರನ ಮನಸ್ಸಿನ ಶಾಂತಿಯನ್ನು ಕದಡುವ ಘಟನೆ ನಡೆದು ಅವನನ್ನು ಅಶಾಂತಿಯ



ಕಂದಕಕ್ಕೆ ದೂಡಿತು. ಇತ್ತೀಚೆಗೆ ಹನ್ನೊಂದನೇ ನಂಬರಿನ ಕೋಣೆ ಖಾಲಿಯಾದದ್ದೆ ಲಾಡ್ಜಿನ ಕೆಲಸಗಾರರು ಮೊದಲು ಗಂಗಾಧರನಿಗೆ ವಿಷಯ ತಿಳಿಸಿ ಅವನ ಅನುಮತಿ ಪಡೆದು ಕೋಣೆಯನ್ನು ಸ್ವಚ್ಛಗೊಳಿಸುವ ಕ್ರಮವನ್ನು ರೂಢಿಸಿಕೊಂಡಿದ್ದರು. ಪ್ರತಿಬಾರಿ ಕೋಣೆ ಖಾಲಿಯಾದಾಗಲೆಲ್ಲ ಗಂಗಾಧರ ಅರೆಘಳಿಗೆ ಆ ರೂಮಿನಲ್ಲಿ ಮಲಗಿ ಬರುವುದು ಲಾಡ್ಜಿನ ಎಲ್ಲ ಕೆಲಸಗಾರರಿಗೆ ಸಹಜ ಎನ್ನುವಂತಾಗಿತ್ತು. ವಿಶೇಷವಾಗಿ ಯುವಜೋಡಿ ಆ ರೂಮನ್ನು ಬಾಡಿಗೆಗೆ ತೆಗೆದುಕೊಂಡಿದ್ದರೆ ಖಾಲಿಯಾದ ತಕ್ಷಣ ತನಗೆ ತಿಳಿಸುವಂತೆ ಗಂಗಾಧರ ಎಲ್ಲ ಕೆಲಸಗಾರರಿಗೆ ತಾಕೀತು ಮಾಡಿದ್ದ. ಆ ದಿನ ರೂಮ್ ಬಾಯ್ ಬಂದು ಹೇಳಿದ್ದ, 'ಅಣ್ಣಾ ರೂಮ್ ನಂಬರ್ ಹನ್ನೊಂದು ಈಗ ಖಾಲಿಯಾಯಿತು. ಗಂಡಹೆಂಡತಿ ಅಂತ ಕಾಣುತ್ತೆ'. ಅವರಿಬ್ಬರು ನಿನ್ನೆ ರಾತ್ರಿ ರೂಮ್ ತೆಗೆದುಕೊಳ್ಳುವಾಗಲೇ ಗಂಗಾಧರ ಅವರನ್ನು ಗಮನಿಸಿದ್ದ. ಯಾವ ಅನುಮಾನ ಶಂಕೆಗೆ ಆಸ್ಪದವಿಲ್ಲದೆ ಅವರಿಬ್ಬರು ಪತಿಪತ್ನಿಯೆಂದು ಅವನ ಮನಸ್ಸು ಒಪ್ಪಿಕೊಂಡಿತ್ತು. ಗೋಡೆಗಳ ಸಂಭಾಷಣೆಯಲ್ಲಿನ ರೋಮ್ಯಾಂಟಿಕ್ ಪ್ರಹಸನಕ್ಕಾಗಿ ಆತುರಾತುರವಾಗಿ ಕೋಣೆಗೆ ಬಂದು ಕದವಿಕ್ಕಿ ಮಂಚ ಸೇರಿದ. ಗೋಡೆಗಳ ಮಾತು ಆಗಷ್ಟೆ ಶುರುವಾಗಿತ್ತು. 'ಅಬ್ಬಾ ಎಂಥ ನೀಚರು ಈ ಮನುಷ್ಯರು. ಇವರನ್ನು ನಂಬುವುದಾದರು ಹೇಗೆ. ಜನ್ಮಕ್ಕೆ ಕಾರಣನಾದ ಅಪ್ಪನನ್ನೆ ಸಾಯಿಸಲು ಬಯಸುತ್ತಿದ್ದಾನಲ್ಲಾ ಈ ಪಾಪಿ. ಅವನಿಗೆ ಒಳ್ಳೆಯದಾಗೊಲ್ಲ' ಎಂದು ಶಪಿಸಿತು ಒಂದನೇ ಗೋಡೆ. 'ಹೆಣ್ಣಾಗಿ ಆಕೆಗೂ ಬುದ್ಧಿ ಬೇಡ್ವಾ. ಮಾವನನ್ನು ಕೊಲ್ಲಿಸೊದಕ್ಕೆ ಗಂಡನಿಗೆ ಕುಮ್ಮಕ್ಕು ಕೊಡ್ತಿದ್ದಾಳೆ. ಹೆಣ್ಣು ಸಂಸಾರದ ಕಣ್ಣು ಅಂತಾರೆ. ಆದರೆ, ಇಲ್ಲಿ ಇವಳು ಮನೆಗೆ ಮಾರಿ ಆಗಿದ್ದಾಳೆ' ನಿಂದಿಸಿತು ಎರಡನೇ ಗೋಡೆ. 'ಪಾಪ ಆ ಮುದುಕ ಸಾಯೊವರೆಗೂ ಇವರಿಗೆ ತಾಳ್ಮೆ ಇಲ್ಲ ನೋಡಿ. ಅವನನ್ನು ಸಾಯಿಸಿ ಆಸ್ತಿ ಕಬಳಿಸಬೇಕು ಅಂತ ಪ್ಲಾನ್ ಹಾಕಿದ್ದಾರೆ' ಸತ್ಯ ಬಿಚ್ಚಿಟ್ಟಿತು ಮೂರನೇ ಗೋಡೆ. 'ಇನ್ನೆರಡು ದಿನಗಳಲ್ಲಿ ಆ ಮುದುಕನ ಹೆಣ ಬೀಳುತ್ತೆ' ಎಂದಿತು ನಾಲ್ಕನೇ ಗೋಡೆ, ಅವುಗಳ ಮಾತು ಕೇಳಿ ಆ ಕೊರೆಯುವ ಚಳಿಯಲ್ಲೂ ಬೆವರಿದ ಗಂಗಾಧರ.

ಕಾಕತಾಳೀಯ ಎನ್ನುವಂತೆ ಗೋಡೆಗಳ ಈ ಸಂಭಾಷಣೆ ನಡೆದ ಎರಡು ದಿನಗಳಲ್ಲೇ ನಗರದ ಉದ್ಯಮಿಯೊಬ್ಬರ ಭೀಕರ ಕೊಲೆಯಾಯಿತು. ಇದು ಆಸ್ತಿಗಾಗಿ ಮಾಡಿದ ಕೊಲೆ ಎಂದು ಪತ್ರಿಕೆಗಳು ಪುಟಗಟ್ಟಲೆ ವರದಿ ಪ್ರಕಟಿಸಿದವು. ಈ ಸುದ್ದಿ ಓದಿ ಗಂಗಾಧರನಿಗೆ ಎಲ್ಲವೂ ಅಯೋಮಯ ಅಗೋಚರ ಅನಿಸಿತು. ಪತ್ರಿಕೆಯಲ್ಲಿ ಪ್ರಕಟವಾದ ಕೊಲೆಯಾದ ಉದ್ಯಮಿಯ ಕುಟುಂಬದ ಫೋಟೊದಲ್ಲಿ ಎರಡು ದಿನಗಳ ಹಿಂದಷ್ಟೆ ಲಾಡ್ಜಿನ ಹನ್ನೊಂದನೇ ನಂಬರಿನ ರೂಮಿನಲ್ಲಿ ಒಂದು ರಾತ್ರಿ ತಂಗಿದ್ದ ಗಂಡಹೆಂಡತಿ ಸ್ಪಷ್ಟವಾಗಿ ಕಾಣಿಸಿದರು. ಫೋಟೊ ನೋಡುತ್ತಿದ್ದಂತೆ